

# ಎರಡು ಜಡೆ ಕಮಲಕುಮಾರಿ ಜಯಂತಿ ಆದ ಘಟನೆಗೆ 50 ವರ್ಷ!

ಕನ್ನಡ ಚಿತ್ರರಂಗದ ನಾಯಕಿಯರ ಪರಂಪರೆ ಉಜ್ವಲವಾಗಿದ್ದ ದಿನಗಳಲ್ಲಿ ಚಿತ್ರರಸಿಕರ ಕಣ್ಮಣಿಯಾಗಿ ಕಂಗೊಳಿಸಿದವರು ನಟಿ ಜಯಂತಿ. ಅಭಿನಯ ಚಾತುರ್ಯದಿಂದ 'ಅಭಿನಯ ಶಾರದೆ' ಎನ್ನುವ ಪ್ರಶಂಸೆಗೆ ಒಳಗಾದ ಅವರು, ಗ್ಲಾಮರಸ್ ಪಾತ್ರಗಳಲ್ಲಿ ಕಾಣಿಸಿಕೊಳ್ಳುವ ಮೂಲಕ ಯುವಪ್ರೇಕ್ಷಕರ ಮೈಮನಗಳಲ್ಲಿ ಮಿಂಚಿನಹೊಳೆ ಹರಿಸಿದವರು. 'ಚಂದವಳ್ಳಿಯ ತೋಟ', 'ಚಕ್ರತೀರ್ಥ', 'ಮಿಸ್ ಲೀಲಾವತಿ', 'ಮಣ್ಣಿನ ಮಗಳು', 'ಎಡಕಲ್ಲು ಗುಡ್ಡದ ಮೇಲೆ', 'ಭಲೇ ಬಸವ', 'ಬೆಟ್ಟದ ಹುಲಿ', 'ಶ್ರೀಕೃಷ್ಣ ದೇವರಾಯ', 'ಕಸ್ತೂರಿ ನಿವಾಸ', 'ಬಹದ್ದೂರ್ ಗಂಡು' ಅವರ ಅಭಿನಯದ ಕೆಲವು ಜನಪ್ರಿಯ ಚಿತ್ರಗಳು. 1968ರಲ್ಲಿ ತೆರೆಕಂಡ 'ಜೇನುಗೂಡು', ಅವರು ಪೂರ್ಣ ಪ್ರಮಾಣದ ನಾಯಕಿಯಾಗಿ ನಟಿಸಿದ ಮೊದಲ ಸಿನಿಮಾ. ಬೆಳ್ಳಿತೆರೆ ಬದುಕಿಗೆ ಐವತ್ತು ವರ್ಷಗಳು ತುಂಬಿದ ಸಂದರ್ಭದಲ್ಲಿ, ಜಯಂತಿ ಅವರು 'ಸುಧಾ'ಕ್ಕೆ ನೀಡಿದ ವಿಶೇಷ ಸಂದರ್ಶನದ ಆಯ್ದ ಭಾಗಗಳು ಇಲ್ಲಿವೆ.

**■ ರಘುನಾಥ ಚ.ಹ.**
ಚಿತ್ರಗಳು: ಆನಂದ ಬಕ್ಷಿ